486 ಶ್ರೀ. ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿಗೆ ಲೋಕೋಪಯೋಗಿ ಇಲಾಖೆಯಲ್ಲಿ ಅಪೆಂಡಿಕ್ಸ್–ಇ ಯೋಜನೆಯನ್ನು ಮಂಜೂರು ಮಾಡಲಾಗುವುದೇ;

ಆ) ಹಾಗಿಲ್ಲದಿದ್ದಲ್ಲಿ ಮಂಜೂರು ಮಾಡದಿರಲು ಕಾರಣಗಳೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹೌದು.

ಆ) ಉದ್ಭವಿಸುವುದಿಲ್ಲ.

217 ಶ್ರೀ ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯಿಂದ ರಾಜ್ಯದಲ್ಲಿ ಲೆಕ್ಕ ಶೀರ್ಷಿಕೆ 5054/3054 ಅಡಿಯಲ್ಲಿ ಪಾವತಿ ಮಾಡಿರುವ ಹಣವೆಷ್ಟು; ಬಾಕಿ ಉಳಿದಿರುವ ಬಿಲ್ಲುಗಳೆಷ್ಟು;

ಆ) ಗುಲ್ಬರ್ಗಾ ವಿಭಾಗ ಮತ್ತು ಯಾದಗಿರಿ ವಿಭಾಗಗಳಲ್ಲಿ ಬಾಕಿ ಇರುವ ಬಿಲ್ಲುಗಳೆಷ್ಟು; ಬಾಕಿಯಿರುವ ಬಿಲ್ಲುಗಳಿಗೆ ಯಾವಾಗ ಹಣ ಪಾವತಿ ಮಾಡಲಾಗುವುದು;

ಇ) ಸೇಡಂ ಹಾಗೂ ಚಿಂಚೋಳಿ ತಾಲ್ಲೂಕಿನಲ್ಲಿ ಬಾಕಿ ಇರುವ ಕಾಮಗಾರಿಗಳ ಬಿಲ್ಲುಗಳ ಮೊತ್ತವೆಷ್ಟು; (ವಿವರ ಒದಗಿಸುವುದು);

ಈ) ಈ ಬಾಕಿಯಿರುವ ಬಿಲ್ಲುಗಳಿಗೆ ಯಾವಾಗ ಹಣ ಪಾವತಿಸಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಲೋಕೋಪಯೋಗಿ ಇಲಾಖೆಯಲ್ಲಿ ಏಪ್ರಿಲ್–2009ರಿಂದ ನವೆಂಬರ್ 2009ರ ವರೆಗೆ ಲೆಕ್ಕ ಶೀರ್ಷಿಕೆ–5054/3054 ಅಡಿಯಲ್ಲಿ ಪಾವತಿಸಿರುವ ಹಾಗೂ ಬಾಕಿಯಿರುವ ಬಿಲ್ಲುಗಳ ವಿವರ ಕೆಳಕಂಡಂತಿವೆ.

(ರೂ,ಲಕ್ಷಗಳಲ್ಲಿ)

ಕ್ರ ಸಂ.	ವಲಯ	ಪಾವತಿಸಿದ ಮೊತ್ತ		ಬಾಕಿ ಬಿಲ್ಲುಗಳ ಮೊತ್ತ	
		5054	3054	5054	3054
1	2	3	4	5	6
1	ಸಂಪರ್ಕ ಮತ್ತು ಕಟ್ಟಡಗಳು, (ದ) ಬೆಂಗಳೂರು	13997.13	8646.47	11208.21	20072.48
2	ಸಂಪರ್ಕ ಮತ್ತು ಕಟ್ಟಡಗಳು, (ಉ) ಧಾರವಾಡ	12026.45	9045.09	13204.51	14466.39
	ಒಟ್ಟು	**26023.58**	**17691.56**	**24412.72**	**34538.87**

ಆ) ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಗುಲ್ಬರ್ಗಾ ವಿಭಾಗದಲ್ಲಿ ರೂ.2152.94 ಲಕ್ಷ, ಹಾಗೂ ಯಾದಗಿರಿ ವಿಭಾಗದಲ್ಲಿ ರೂ.985.03 ಲಕ್ಷಗಳ ಬಿಲ್ಲುಗಳು ಪಾವತಿಗಾಗಿ ಬಾಕಿ ಇರುತ್ತವೆ. ಈ ಬಿಲ್ಲುಗಳನ್ನು ರಾಜ್ಯದ ಸಂಪನ್ಮೂಲವನ್ನಾಧರಿಸಿ ಆರ್ಥಿಕ ಇಲಾಖೆಯಿಂದ ಕಾಲಕಾಲಕ್ಕೆ ಬಿಡುಗಡೆ ಆಗುವ ಮೊತ್ತವನ್ನಾಧರಿಸಿ ಪಾವತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಸೇಡಂ ತಾಲ್ಲೂಕಿನಲ್ಲಿ ರೂ.100.90 ಲಕ್ಷಗಳು, ಹಾಗೂ ಚಿಂಚೋಳಿ ತಾಲ್ಲೂಕಿನಲ್ಲಿ ರೂ.196.61 ಲಕ್ಷಗಳ ಮೊತ್ತದ ಬಿಲ್ಲುಗಳು ಬಾಕಿ ಇರುತ್ತವೆ. ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಈ) ಈ ಬಿಲ್ಲುಗಳನ್ನು ರಾಜ್ಯದ ಸಂಪನ್ಮೂಲವನ್ನಾಧರಿಸಿ ಆರ್ಥಿಕ ಇಲಾಖೆಯಿಂದ ಕಾಲಕಾಲಕ್ಕೆ ಬಿಡುಗಡೆ ಆಗುವ ಮೊತ್ತವನ್ನಾಧರಿಸಿ ಪಾವತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ–1

ಸೇಡಂ ಮತ್ತು ಚಿಂಚೋಳಿ ತಾಲ್ಲೂಕುಗಳಲ್ಲಿ ಬಾಕಿ ಇರುವ ಬಿಲ್ಲುಗಳ ವಿವರ :

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಲೆಕ್ಕ ಶೀರ್ಷಿಕೆ	ಸೇಡಂ ತಾಲ್ಲೂಕು	ಚಿಂಚೋಳಿ ತಾಲ್ಲೂಕು
1	2059	–	4.31
2	2216 ವಸತಿ	–	3.73
3	3054 (ಯೋಜನೆ)	25.40	43.03
4	3054 ರಾಜ್ಯ ಹೆದ್ದಾರಿ	–	126.58
5	5054 ನಂಜುಂಡಪ್ಪ	10.98	5.90
6	5054 SCSP (KSHIP)	8.83	1.91
7	5054 TSP (KSHIP)	2.12	0.88
8	4059	–	10.27
9	5054 ಇತರೆ ರಸ್ತೆ ನಿರ್ಮಾಣ	6.04	–
10	ನಬಾರ್ಡ್	47.53	–
		100.90	196.61

827 ಶ್ರೀ ಶ್ರೀನಿವಾಸ್.ಎಂ (ಮಂಡ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರದಲ್ಲಿ ಮಿನಿ ವಿಧಾನಸೌಧ ಮಂಜೂರಾಗಿದ್ದು, ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಶಂಕುಸ್ಥಾಪನೆಯಾಗಿದ್ದರೂ ಸಹ ಇದುವರೆವಿಗೂ ಕಟ್ಟಡದ ಕಾಮಗಾರಿ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕಟ್ಟಡದ ಕಾಮಗಾರಿಯನ್ನು ಪ್ರಾರಂಭಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

ಇ) ಮಿನಿ ವಿಧಾನ ಸೌಧದ ಕಟ್ಟಡದ ಕಾಮಗಾರಿಗಾಗಿ ಸರ್ಕಾರ ಇದುವರೆವಿಗೂ ಬಿಡುಗಡೆ ಮಾಡಿರುವ ಅನುದಾನದ ಮೊತ್ತ ಎಷ್ಟು;